ಕತೆ

# ಮರೆತ ಬಾಚಣಿಗೆ




## ರವಿರಾಜ ಬೈಕಂಪಾಡಿ

ಕಲೆ: ಸಂತೋಷ್ ಸಸಿಹಿತ್ಲು


ಈ ಘಟನೆ ನಡೆದಿದ್ದು ನನ್ನ ತಂಗಿಯ ಮದುವೆ ನಡೆದ ವರ್ಷವೇ. ಮದುವೆಯ ತಯಾರಿಗಾಗಿ ನಾನು ಕರಮಚಂದನಲ್ಲಿ ಒಂದು ತಿಂಗಳ ರಜೆ ಕೇಳಿದ್ದೆ. ಆಕೆಯ ಮದುವೆಯು ವಿರಾಜಪೇಟೆಯ ಮೊಗ್ರಾ ರಸ್ತೆಯಲ್ಲಿರುವ ಕಾವೇರಿ ಕಲ್ಯಾಣಮಂಟಪದಲ್ಲಿ ಜರುಗಲಿತ್ತು. ಹಾಗಾಗಿ, ರಜೆಗೆ ಹೋಗುವ ಒಂದು ವಾರದ ಮೊದಲು ಅದೇ ಕಲ್ಯಾಣಮಂಟಪದಲ್ಲಿ ನಡೆದ ಈ ಪ್ರಕರಣವು ನನ್ನ ಮನದಲ್ಲಿ ಅಚ್ಚಳಿಯದೇ ಉಳಿದಿದೆ.

ಆ ದಿನ ಭಾನುವಾರ. ಸುಮಾರು ಹನ್ನೊಂದರ ಹೊತ್ತಿಗೆ ಕರಮಚಂದನಿಗೆ ನಮ್ಮ ಸಹೋದ್ಯೋಗಿ ವಕೀಲ ಬಡುವಂಡ ದೇವಯ್ಯನ ಕರೆ ಬಂದಿತು. ಆತ ಆ ಹೊತ್ತಿಗೆ ಕಾವೇರಿ ಕಲ್ಯಾಣಮಂಟಪದಲ್ಲಿದ್ದು, ಅಲ್ಲೊಂದು ನೆಕ್ಲೇಸ್ ಕಳವು ನಡೆದಿದ್ದು, ತನಿಖೆಗೆ ಬರಬಹುದೇ ಎಂದು ವಿಚಾರಿಸಿದ್ದ. ಇದೊಂದು ತೀರಾ ಕ್ಷುಲ್ಲಕವಾದ ಪ್ರಕರಣವೆಂದು ಅನ್ನಿಸಿದರೂ, ದೇವಯ್ಯನ ಕರೆಯನ್ನು ನಿರಾಕರಿಸಲಾಗದೆ, ಕರಮಚಂದ ಒಪ್ಪಿಗೆ ಸೂಚಿಸಿದ.

ಅರ್ಧ ತಾಸಿನಲ್ಲಿ ನಾವು ಕಲ್ಯಾಣ ಮಂಟಪದಲ್ಲಿದ್ದೆವು. ಜೋರಾದ ವಾಲಗದ ಸದ್ದು. ಸಭಾಂಗಣದ ತುಂಬಾ ಚದುರಿದಂತೆ ಇದ್ದ ಜನ ಸಮೂಹ. ಗದ್ದಲದ ನಡುವೆ ತೂರಿ ಬರುವ ಏರುದನಿಯ ಮಾತುಗಳು. ನಾವು ಒಳಗಡಿಯಿರಿಸುತ್ತಿದ್ದಂತೆ ದೇವಯ್ಯ ನಮ್ಮನ್ನು ಸ್ವಾಗತಿಸಿ, ಮದುಮಗಳಾದ ರಾಖಿ ಪೂವಯ್ಯಳ

